ಸಿಕ್ಕಾಪಟ್ಟೆ ಒಳ್ಳೆಯವಳಂತೆ ನಡೆದುಕೊಳ್ಳುತ್ತಿರುವುದು, ತನ್ನನ್ನು ಕೇಳದೆ ಸ್ವತಃ ದಿನ ನಿಗದಿಪಡಿಸಿದ್ದು, ಈಗ ಇಲ್ಲೆ ಉಳಿದುಕೊಂಡು ತನಗೆ ಮನೆಗೆ ಹೋಗಲು ಹೇಳುತ್ತಿರುವುದು ಎಲ್ಲವೂ ಕರಿಯಕ್ಕನಿಗೆ ವಿಚಿತ್ರವೆನಿಸಿತು. ತಾನು ಹೆತ್ತ ಮಗಳಾದರೂ ಈಗ ಗೌರವದ ಸ್ಥಾನದಲ್ಲಿರುವ, ಅಲ್ಲದೆ ತನ್ನ ಪಾಲಿಗೆ ಚಿನ್ನದ ಮೊಟ್ಟೆಯಿಡುವ ಕೋಳಿಯೂ ಆಗಿರುವ ನಾಗಕ್ಕನಿಗೆ ಎದುರು ಮಾತನಾಡಲಾಗದೆ ಕರಿಯಕ್ಕ ಕಾರೇರಿ ಮನೆಗೆ ಹೊರಟಳು.

ರಾತ್ರಿ ನಾಗಕ್ಕನಿಗೆ ಮಲಗಲೆಂದು ಕೊಟ್ಟಿರುವ ಕೋಣೆಯಲ್ಲಿ ಮಕ್ಕಳೆಲ್ಲ ಸೇರಿದ್ದರು.

"ಅಕ್ಕಾ, ನಿಮ್ಮ ತೊಡೆಯಲ್ಲಿ ಹಾವಿನ ದೊಡ್ಡ ಮಚ್ಚೆ ಇದೆಯಂತೆ ಹೌದಾ? ನಮ್ಮಮ್ಮ, ದೊಡ್ಡಮ್ಮನಿಗೆಲ್ಲಾ ತೋರಿಸಿದರಂತೆ" ಕುತೂಹಲದಿಂದ ಕೇಳಿದಳು ಪಾರು.

"ಅಕ್ಕಾ, ನಮಗೂ ತೋರಿಸಿ" ಎಂದು ಗೋಗರೆದ ಚೇತು. ಉಳಿದ ಮಕ್ಕಳೂ ಧ್ವನಿಗೂಡಿಸಿದರು.

ನಾಗಕ್ಕ ಕೋಣೆಯ ಬಾಗಿಲು ಹಾಕಿ, ಮಕ್ಕಳ ಮುಂದೆ ಕುಳಿತು ತನ್ನ ನೈಟಿ ಎತ್ತಿ ತೊಡೆಯ ಭಾಗ ತೋರಿಸಿದಳು. ಮಾರುದ್ದದ, ಹಸಿರು ಬಣ್ಣದ ಹಾವಿನ ಚಿತ್ರ!

"ಅಯ್ಯೋ, ನನಗಂತೂ ಭಯವಾಗುತ್ತಿದೆಯಪ್ಪಾ" ಎಂದು ಕಣ್ಮುಚ್ಚಿದಳು ಪಾರು. ಚೇತುವಾಗಲೇ ಭಯದಿಂದ ಪಾರುವಿನ ಹಿಂದೆ ಅಡಗಿ ಕೂತಾಗಿತ್ತು.

ಆದರೆ ಸಚ್ಚಿಯೊಬ್ಬ ಮಾತ್ರ, ಅವಳ ಬೆಳ್ಳಗಿನ ಬಾಳೆದಿಂಡಿನಂತಹ ತೊಡೆಯನ್ನು ನೋಡಬೇಕೋ, ಇಲ್ಲ ಚಿತ್ರವನ್ನಷ್ಟೇ ನೋಡಬೇಕೋ ಎಂಬ ಗೊಂದಲದಲ್ಲಿ ಎರಡನ್ನೂ ಕಣ್ಣರಳಿಸಿ ಮತ್ತೆಮತ್ತೆ ನೋಡಿದ್ದ.

ಯಾರಿಗೂ ಹೆದರದ, ಅಜ್ಜಿಯ ಬಲಗೈ ಬಂಟ ಗೋಪು, "ಇದೆಂಥ, ಒಳ್ಳೆ ಟ್ಯಾಟೂ ಹಾಕಿಸಿಕೊಂಡ ಹಾಗಿದೆ" ಎಂದಿದ್ದಷ್ಟೇ ತಡ, ನಾಗಕ್ಕನ ಕಣ್ಣುಗಳು ಅಗಲವಾಗಿ, ಕೆಂಪೇರಿ, ಹೂಂಕರಿಸತೊಡಗಿದಳು. ಹೆದರಿದ ಪಾರು, ಚೇತು ಮತ್ತು ಗೋಪು ಕೋಣೆಯಿಂದ ಓಟಕಿತ್ತರು. ಸಚ್ಚಿಯೂ ಕೂಡ ಮನಸ್ಸಿಲ್ಲದ ಮನಸ್ಸಿನಿಂದ ಹೊರನಡೆದ.

ಸಚ್ಚಿಗೆ ಇವತ್ತಿಗೂ ಕನಸಿನಲ್ಲಿ ಕಾಡುವ 'ನಾಗಕ್ಕ ಮೀಸೆ ಮುಟ್ಟಿದ' ಪ್ರಸಂಗ ನಡೆದದ್ದು ಮಾರನೆಯ ದಿನ ಮುಂಜಾನೆ. ಆ ಗಳಿಗೆಯಲ್ಲಿ ಅಮ್ಮ ಕರೆದರೆಂದು ಸಚ್ಚಿ ಅಲ್ಲಿಂದ ಕಾಲ್ಕಿತ್ತರೂ ನಾಗಕ್ಕ ಮಾತ್ರ ಹಿತ್ತಲು ನೋಡುವ ನೆಪದಲ್ಲಿ ಬಹಳ ಹೊತ್ತು ಅಲ್ಲೇ ಉಳಿದುಕೊಂಡಳು.

ಬೆಳಗ್ಗೆ 11 ಗಂಟೆಗೆ ಶುರುವಾಯಿತು ನಾಗಕ್ಕನ ದರ್ಶನ. ಮೈಮೇಲೆ ದೇವರು ಬಂದಾಗ, ಕಣ್ಣರಳಿಸಿ ಹೂಂಕರಿಸಿ, ನೆಲ ಅದುರುವಂತೆ ಮೈ ನಡುಗಿಸಿದ ಅವಳನ್ನು ಕಂಡು, ಮನೆಯವರೆಲ್ಲ ಭಯ, ಭಕ್ತಿಯಿಂದ ಕೈ ಮುಗಿದರು. ನಾಗಕ್ಕನ ಮೈಮೇಲಿನ ದೇವರು ನುಡಿಯಿತು. "ನಿಮ್ಮ ಮೇಲೆ ಮಾಟವಾಗಿದೆ... ಈ ಮನೆಯ ಸುತ್ತಲೇ ಮಾಟವಾಗಿದೆ... ಹ್ರೂಂ... ಹ್ರೂಂ " ಎನ್ನುತ್ತಾ ನಾಗಕ್ಕ ಜಿಂಕೆಯಂತೆ ಚಂಗನೆ ನೆಗೆದು, ಹಿತ್ತಲಿನ ಕಡೆ ಓಡಿದಳು. ಎಲ್ಲರೂ ದಡದಡನೆ ಹಿಂಬಾಲಿಸಿದರು. ತೆಂಗಿನ ಮರದ ಬುಡದಲ್ಲಿ ನಿಂತು, "ಉತ್ತರಕ್ಕೆ" ಎಂದು ಹೂಂಕರಿಸಿ, ಮತ್ತೆ ಒಂದೇ ನೆಗೆತಕ್ಕೆ ಹಿತ್ತಲಿನ ಉತ್ತರಕ್ಕಿದ್ದ ಬಾಳೆ ಗಿಡಗಳ ಬುಡದಲ್ಲಿದ್ದಳು. ಆವೇಶದಿಂದ ಬಾಳೆ ಬುಡವನ್ನು ಕೆದಕಿದವಳ ಕೈಗೆ ಸಿಕ್ಕಿತ್ತು ಕುಂಕುಮವಿದ್ದ ಬಟ್ಟೆಯ ಚಿಕ್ಕ ಗಂಟು! ಅಲ್ಲಿಂದ ಬಾವಿಕಟ್ಟೆಯ ಕಡೆಗೆ ನೆಗೆದು, ಕಟ್ಟೆಗೆ ತಾಗಿಕೊಂಡೇ ಇದ್ದ ತೆಂಗಿನ ಮರದ ಬುಡ ಕೆದಕಿದಾಗ, ಅಲ್ಲೂ ಕುಂಕುಮದ ಗಂಟು! ಇಷ್ಟೂ ದೃಶ್ಯವನ್ನು ಕಣ್ಣಾರೆ ಕಂಡ ಮನೆಯವರು ದಂಗಾದರು. ಅಜ್ಜಿಯಂತೂ ಮಾಟ ಮಾಡಿದವರಿಗೆ ಅಲ್ಲೇ ಹಿಡಿ ಶಾಪ ಹಾಕತೊಡಗಿತು. "ನನ್ನ ಮುಂದೆಯೇ ಅಪಶಬ್ದ ನುಡಿಯುತ್ತೀಯಾ'' ಎಂದು ನಾಗಕ್ಕನ ಮೇಲಿದ್ದ ದೇವರು ಹೂಂಕರಿಸಿತು.

"ತಪ್ಪಾಯಿತು ದೇವರೆ, ಕ್ಷಮಿಸು" ಎನ್ನುತ್ತಾ ಮನೆಯವರು ಅಜ್ಜಿಯ ಬಾಯಿ ಮುಚ್ಚಿಸಿದರು.